ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ದಕ್ಷಿಣ ಕನ್ನಡ, ಮಂಗಳೂರು

**ಸ್ಪೆಷಲ್ ಕೇಸ್ ನಂಬ್ರ 11/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸವಿತ್ರ ತೇಜ್ ಪಿ.ಡಿ | ಚಾಸಾಃ 38 |
| ತಂದೆಯ ಹೆಸರು | : | ದೇವಿದಾಸ್ | ಪ್ರಾಸಾಃ 20 |
| ಪ್ರಾಯ | : | 44 ವರ್ಷ | ದಿನಾಂಕಃ 05.05.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ರೀಡರ್, ಪಶ್ಚಿಮ ವಲಯ ಕಚೇರಿ ಮಂಗಳೂರು | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಜುಲೈ 2020 ರಿಂದ ಫೆಬ್ರವರಿ 2022 ರವರೆಗೆ ಮಂಗಳೂರು ಪೂರ್ವ ಪೊಲೀಸ್ ಠಾಣೆಯಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ಈ ಪ್ರಕರಣದ ಕಡತವನ್ನು ದಿಃ 10.06.2021 ರಂದು ಪ್ರಾಸಾ-15 ರವರಿಂದ ಪಡೆದುಕೊಂಡು ಅಲ್ಲಿಯವರೆಗಿನ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಪ್ರಕರಣದಲ್ಲಿ ದಸ್ತಗಿರಿಯಾಗಿದ್ದ 1 ನೇ ಆರೋಪಿಯನ್ನು ವಿಚಾರಿಸಿ ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. 1 ನೇ ಆರೋಪಿಯು ಮಲಯಾಳಿ ಭಾಷೆಯಲ್ಲಿ ಹೇಳಿದ್ದನ್ನು ಚಾಸಾ-27 ರವರು ಕನ್ನಡಕ್ಕೆ ತರ್ಜುಮೆ ಮಾಡಿದ್ದನ್ನು ಬೆರಳಚ್ಚು ಮಾಡಿಸಿರುತ್ತೇವೆ. ಸದರಿ ಸ್ವ ಇಚ್ಛಾ ಹೇಳಿಕೆಯನ್ನು ನೋಡುತ್ತಿದ್ದು ಅದನ್ನು ನಿಪಿ-52 ಎಂದು, ಸಾಕ್ಷಿ ಸಹಿಯನ್ನು ನಿಪಿ-52(ಎ) ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ-52(ಬಿ) ಎಂದು ಗುರುತಿಸಲಾಯಿತು.

3. 1 ನೇ ಆರೋಪಿಯು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ಅಂಚೆ ಮುಖಾಂತರ ಎಲ್.ಎಸ್.ಡಿ. ಬಂದ ಕವರ್ ನ್ನು ನಾನು ಉಳಿದಕೊಳ್ಳುವ ರೂಂ ನಲ್ಲಿ ಇಟ್ಟಿದ್ದು ತನ್ನ ಜೊತೆಗೆ ಬಂದರೆ ಸದರಿ ಕವರ್ ನ್ನು ತೋರಿಸಿ ತೆಗೆದುಕೊಡುತ್ತೇನೆ ಎಂದು ಹೇಳಿರುತ್ತಾನೆ.

ಆರೋಪಿಯ ಸ್ವ ಇಚ್ಚಾ ಹೇಳಿಕೆಯನ್ನು ರಾತ್ರಿ 9 ಗಂಟೆಯಿಂದ 10.30 ಗಂಟೆಯವರೆಗೆ ದಾಖಲಿಸಿಕೊಳ್ಳಲಾಗಿರುತ್ತದೆ.

4. ದಿಃ 11.06.2021 ರಂದು 1 ನೇ ಆರೋಪಿಯನ್ನು ಕೋವಿಡ್ ತಪಾಸಣೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ನ್ಯಾಯಾಲಯಕ್ಕೆ 1 ನೇ ಆರೋಪಿಯನ್ನು ತನಿಖೆಗಾಗಿ ಪೊಲೀಸ್ ಬಂಧನಕ್ಕೆ ಕೇಳಿದ್ದು ನ್ಯಾಯಾಲಯವು ಅದೇ ದಿನ 10 ದಿನಗಳ ಕಾಲ ಪೊಲೀಸ್ ಬಂಧನಕ್ಕೆ ನೀಡಿರುತ್ತದೆ.

5. ನಂತರ ಅದೇ ದಿನ 1 ನೇ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ಮೋಟಾರ್ ಸೈಕಲ್ ನಂ.ಕೆಎಲ್–18–ಎಫ್–3859 ರ ಛಾಯ ಚಿತ್ರವನ್ನು ತೆಗೆದ ಫ್ರಾಸಾ–12 ರವರಿಂದ 65 ಬಿ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ 65 ಬಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–31 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ–31(ಬಿ) ಎಂದು ಗುರುತಿಸಲಾಯಿತು.

6. ಸದರಿ ಬೈಕ್ ನ್ನು ಮುದ್ದೆ ಮಾಲು ಕೋಣೆಯಲ್ಲಿ ಇರುತ್ತದೆ. ಸಾಕ್ಷಿಯು ಕಟಕಟೆಯಿಂದ ಇಳಿದು ಮುದ್ದೆ ಮಾಲು ಕೋಣೆಗೆ ಹೋಗಿ ಸದರಿ ಬೈಕ್ ನ್ನು ನೋಡಿ ಗುರುತಿಸಲು ತಿಳಿಸಲಾಗಿರುತ್ತದೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

7. ಸಾಕ್ಷಿಯು ಮುದ್ದೆ ಮಾಲು ಕೋಣೆಗೆ ಹೋಗಿ ಸದರಿ ಬೈಕ್ ನ್ನು ಗುರುತಿಸಿರುತ್ತಾರೆ. ಸದರಿ ಬೈಕ್ ನ್ನು ಮುದ್ದೆ ಮಾಲು 6 ಎಂದು ಗುರುತಿಸಲಾಯಿತು.

8. ಮೋಟಾರ್ ಸೈಕಲ್ ನ ಪೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ–20 ಎಂದು ಈಗಾಗಲೇ ಗುರುತಿಸಲಾಗಿದೆ. ಸದರಿ ಪೋಟೋಗಳ ಸಿಡಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–20(ಎ) ಎಂದು ಗುರುತಿಸಲಾಗಿದೆ.

9. ನಂತರ ಅದೇ ದಿನ ಕಲಂ 57 ಎನ್.ಡಿ.ಪಿ.ಎಸ್. ರಡಿ ವರದಿಯನ್ನು ಪೊಲೀಸ್ ಆಯುಕ್ತರು ಮಂಗಳೂರು ಇವರಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ಈಗ ನಿಪಿ–53 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಫ್ರಾಸಾ–1 ಮತ್ತು 10 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ.

10. ದಿಃ 12.06.2021 ರಂದು 1 ನೇ ಆರೋಪಿಯು ತನ್ನ ಸ್ವ ಇಚ್ಚಾ ಹೇಳಿಕೆಯಲ್ಲಿ ಹೇಳಿದಂತೆ ನನ್ನನ್ನು, ನಮ್ಮ ಸಿಬ್ಬಂದಿರವರೊಂದಿಗೆ ಬೆಳಗ್ಗೆ 9 ಗಂಟೆಗೆ ಕದ್ರಿ ಕಂಬಳ ರಸ್ತೆಯ ಸುರಜ್ ರೆಬೆಲೊ ರವರ ಡೋರ್ ಸಂ.3–ಡಬ್ಲ್ಯೂ–3–163/1 & 2 ಪಿ.ಜಿ. ಕಟ್ಟಡದ 2 ನೇ ಮಹಡಿಗೆ ಕರೆದುಕೊಂಡು ಹೋಗಿದ್ದು ರೂಂ.15 ನ್ನು ತೋರಿಸಿ ಇದೇ ರೂಂನಲ್ಲಿ ತಾನು ವಾಸವಾಗಿದ್ದು ಅಲ್ಲಿಯೇ ಎಲ್.ಎಸ್.ಡಿ. ತರಿಸಿದ ಖಾಲಿ ಅಂಚೆ ಕವರ್ ಇಟ್ಟಿರುವುದಾಗಿ ಹೇಳಿರುತ್ತಾನೆ.

11. ಸದರಿ ಸದರಿ ಸ್ಥಳಕ್ಕೆ ಪಂಚರಾದ ಫ್ರಾಸಾ–3 ಮತ್ತು ಚಾಸಾ–6 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿಯನ್ನು ತಿಳಿಸಿ 1 ನೇ ಆರೋಪಿಯು ಬಾಗಿಲನ ಹಿಂದೆ ಇಟ್ಟಿದ್ದ ಕೀ ಮೂಲಕ ಬಾಗಿಲಿನ ಬೀಗ ತೆರೆದಿದ್ದು 1 ನೇ ಆರೋಪಿ ಮುಂದಾಗಿ ಒಳಗಡೆ ಹೋಗಿ ಉತ್ತರದ ಗೋಡೆಗೆ ತಾಗಿ ಸಣ್ಣ ಟಿಪಾಯಿ ಇದ್ದು ಅದರ ಮೇಲ್ಗಡೆಯಿಂದ ಸಣ್ಣ ಅಂಚೆ ಕವರ್ ನ್ನು ತೆಗೆದು ಅದೇ ಕವರ್ ನಲ್ಲಿ ಅಂಚೆ ಮೂಲಕ ಎಲ್.ಎಸ್.ಡಿ. ಬಂದಿರುವುದಾಗಿ ಹೇಳಿ ಅದನ್ನು ಹಾಜರುಪಡಿಸಿರುತ್ತಾನೆ.

12. ಸದರಿ ಎಲ್.ಎಸ್.ಡಿ. ಕವರನ್ನು ತೆಗೆದುಕೊಂಡು ಕುಲಂಕುಷವಾಗಿ ಪರಿಶೀಲಿಸಿದಾಗ ಅದರ ಮೇಲೆ Mr. Ajinas V.M., S/o Mr. Asif V.M., A/2, Citadel Apartment, Kadri temple road, Mallikatte, Kadri, Mangaluru – 575002, D.K. Karnataka Tel. +91–9473647816 India and LAPOSTE LB 148954145FR ಎಂಬ ಸ್ಟಿಕರ್ ಅಂಟಿಸಲಾಗಿತ್ತು.

13. ಸದರಿ ಕವರ್ ಗೆ ಕಾಕಿ ಬಣ್ಣದ ಟೇಪ್ ಅಂಟಿಸಿ ಬಂದ್ ಮಾಡಿದ್ದು ಕಂಡು ಬಂದಿದ್ದು ಸದರಿ ಕವರ್ ನ್ನು ಒಂದು ಕಾಕಿ ಕವರ್ ನಲ್ಲಿ ಹಾಕಿ ಭದ್ರಪಡಿಸಿ 'ಇ' ಎಂಬ ಅರಗು ಸೀಲು ಮಾಡಿ ಪಂಚರ ಮತ್ತು ತನಿಖಾಧಿಕಾರಿಯ ಸಹಿ ಇರುವ ಚೀಟಿಯನ್ನು ಅಂಟಿಸಿ CVR ಎಂಬುವುದಾಗಿ ನಿಶಾನೆ ನೀಡಿ ಮುಂದಿನ ಕ್ರಮದ ಬಗ್ಗೆ ಬೆಳಗ್ಗೆ 9.30 ಗಂಟೆಯಿಂದ 10.30 ಗಂಟೆಯವರೆಗೆ ಮಹಜರು ಮೂಲಕ ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ. ಸದರಿ ಮಹಜರನ್ನು ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿ ಲೇಸರ್ ಪ್ರಿಂಟರ್ ಮೂಲಕ ಪ್ರಿಂಟ್ ನ್ನು ತೆಗೆಯಲಾಯಿತು. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು, 1 ನೇ ಆರೋಪಿಯ ಸಹಿಯನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು.

14. ಸದರಿ ಅಂಚೆ ಕವರ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿರುತ್ತದೆ. ಸದರಿ ಕಾಕಿ ಕವರ್ ನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ಸದರಿ ಕಾಕಿ ಕವರ್ ನ ಮೇಲೆ ಅಂಟಿಸಿದ ಚೀಟಿಯ ಮೇಲೆ ನನ್ನ ಮತ್ತು ಪಂಚರ ಸಹಿ ಇದ್ದು ಅದನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

15. ನಂತರ ವಶಪಡಿಸಿಕೊಂಡ ಸ್ವತ್ತನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಸ್ವತ್ತು ಪಟ್ಟಿಯನ್ನು ನೋಡುತ್ತಿದ್ದು ಅದನ್ನು ಈಗ ನಿಪಿ-54 ಎಂದು, ಸಾಕ್ಷಿಯ ಸಹಿಯನ್ನು ನಿಪಿ-54(ಎ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಫ್ರಾಸಾ-3 ಮತ್ತು ಚಾಸಾ-6 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

16. ನಂತರ ದಿಃ 13.06.2021 ರಂದು ಫ್ರಾಸಾ-2, ಚಾಸಾ-14, ಚಾಸಾ-15, ಚಾಸಾ-18, ಚಾಸಾ-17, ಚಾಸಾ-16, ಚಾಸಾ-19, ಚಾಸಾ-20, ಚಾಸಾ-21 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

17. ದಿಃ 15.06.2021 ರಂದು ದಿಃ 10.06.2021 ರಂದು ಮಹಜರು ಮೂಲಕ ಸ್ವಾಧೀನಪಡಿಸಿದ ಸ್ವತ್ತನ್ನು ತಜ್ಞರ ಪರೀಕ್ಷೆಗೆ ಕಳುಹಿಸುವ ಸಲುವಾಗಿ ನ್ಯಾಯಾಲಯಕ್ಕೆ

inventory ಮಾಡಲು ಸತ್ರ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಪೂರ್ವ ಠಾಣಾ ಅಪರಾಧ ಸಂ.43/2021 ರ ಕುರಿತಾಗಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ತೆರಳಿದ ಕಾರಣ ಕಡತವನ್ನು ಫ್ರಾಸಾ–17 ರವರಿಗೆ ವಹಿಸಿಕೊಟ್ಟಿರುತ್ತೇನೆ.

18. ದಿಃ 20.06.2021 ರಂದು ಠಾಣೆಗೆ ವಾಪಾಸ್ ಬಂದು ಫ್ರಾಸಾ–17 ರವರಿಂದ ತನಿಖೆಯನ್ನು ವಹಿಸಿಕೊಂಡಿರುತ್ತೇನೆ. ಅದೇ ದಿನ ಪೊಲೀಸ್ ಬಂಧನದಲ್ಲಿದ್ದ 1 ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ–23 ರಿಂದ 25 ರವರ ಸಾಕ್ಷಿ ಹೇಳಿಕೆಯನ್ನು ಪಡೆದಿರುತ್ತೇನೆ.

19. ದಿಃ 21.06.2021 ರಂದು ಫ್ರಾಸಾ–17 ರವರ ಮುಂದೆ ಹಾಜರುಪಡಿಸಲಾಗಿದ್ದ 2 ನೇ ಆರೋಪಿ ಉಮೇಶ್ ಪ್ರೀತಮ್ ಪ್ರಕಾಶ್ ಪೊಲೀಸ್ ಅಭಿರಕ್ಷೆಯಲ್ಲಿದ್ದು ಆತನು ನಿಪಿ–45 ರಂತೆ ತನ್ನ ಸ್ವ ಇಚ್ಛಾ ಹೇಳಿಕೆಯನ್ನು ಕೊಟ್ಟಿರುತ್ತಾನೆ. ಈ ಬಗ್ಗೆ ಚಾಸಾ–28 ರವರು ಹುಬ್ಬಳ್ಳಿಗೆ ತೆರಳಿ 2 ನೇ ಆರೋಪಿ ತೋರಿಸಿದಂತೆ ತನಿಖೆಯನ್ನು ನಡೆಸಿ ಸ್ವತ್ತನ್ನು ಹಾಜರುಪಡಿಸುವಂತೆ ಜ್ಞಾಪನವನ್ನು ನೀಡಿರುತ್ತೇನೆ. ಸದರಿ ಜ್ಞಾಪನವನ್ನು ನೋಡುತ್ತಿದ್ದು ಅದನ್ನು ನಿಪಿ–55 ಎಂದು ಗುರುತಿಸಲಾಯಿತು.

20. ನಂತರ ಅದೇ ದಿನ ಮ್ಯಾನೇಜರ್, ಇಂಡಸ್‌ಇಂಡ್ ಬ್ಯಾಂಕ್, ಪಿ.ವಿ.ಎಸ್. ಶಾಖೆ ಮಂಗಳೂರು ರವರಿಗೆ ಖಾತೆ ಸಂ.100061838492 ಇದರ ವ್ಯವಹಾರಗಳ ಸ್ಟೇಟ್ ಮೆಂಟ್ ನ್ನು ಹಾಗೂ ಇತರೆ ವಿವರಗಳನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಹಾಗೂ ಮ್ಯಾನೇಜರ್, ಐ.ಸಿ.ಐ.ಸಿ.ಐ. ಬ್ಯಾಂಕ್, ಪಿ.ಎಂ. ರಸ್ತೆ, ಮಂಗಳೂರು ರವರಿಗೆ ಖಾತೆ ಸಂ.xxxxxxx0793 ಆರೋಪಿ ಸಂ.2 ಈತನ ವ್ಯವಹಾರಗಳ ಸ್ಟೇಟ್ ಮೆಂಟ್ ನ್ನು ಹಾಗೂ ಇತರೆ ವಿವರಗಳನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ.

21. ನಂತರ ಅದೇ ದಿನ Superintendent of Post, Foreign Post Office, Chamarajapete, Bengaluru ಇವರಿಗೆ ಮಂಗಳೂರು ಕಂಕನಾಡಿ ಅಂಚೆ ಕಚೇರಿಯಿಂದ ಬಟವಾಡಿ ಆಗಿರುವ ಫ್ರಾನ್ಸ್ ಇಂಟರ್ ನ್ಯಾಷನಲ್ ಎಂಬ ಹೆಸರಿನ 4 ಸ್ಟಾಂಪ್ ಇದ್ದ Mr. Ajinas V.M., S/o Mr. Asif V.M., A/2, Citadel Apartment, Kadri temple road, Mallikatte, Kadri, Mangaluru – 575002, D.K.

Karnataka Tel. +91–9473647816 India and LAPOSTE LB 148954145FR ಎಂಬ ಕುರಿತಾಗಿ ಮಾಹಿತಿಯನ್ನು ಕೋರಿರುತ್ತೇನೆ. ಅಂದರೆ ಅಂಚೆ ಪಾರ್ಸಲ್ ಎಲ್ಲಿಂದ ಬಂದಿರುತ್ತದೆ, ಅಂಚೆ ಕಚೇರಿಯಲ್ಲಿ ಸ್ವೀಕರಿಸಿದ ಮತ್ತು ರವಾನಿಸಿದ ವಿವರ ಮತ್ತು ಇನ್ನಿತರ ಮಾಹಿತಿಯನ್ನು ಇಮೇಲ್ ಮೂಲಕ ಕೋರಿರುತ್ತೇನೆ.

22. ದಿಃ 22.06.2021 ರಂದು ಹಿರಿಯ ಅಂಚೆ ಅಧೀಕ್ಷಕರು, ಮಂಗಳೂರು ವಿಭಾಗದವರಿಂದ ಎಲ್.ಎಸ್.ಡಿ. ಇದ್ದ ಅಂಚೆ ಪತ್ರವನ್ನು ಯಾರಿಗೆ ನೀಡಿದ್ದರ ಕುರಿತಾಗಿ ವಿವರವನ್ನು ಅಂಚೆ ಮೂಲಕ ಸ್ವೀಕರಿಸಿರುತ್ತೇನೆ. ಸದರಿ ದಾಖಲೆಯನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–16 ಮತ್ತು 17 ಎಂದು ಗುರುತಿಸಲಾಗಿರುತ್ತದೆ. ನಿಪಿ–17 ರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ–17(ಬಿ) ಎಂದು ಗುರುತಿಸಲಾಯಿತು.

23. ದಿಃ 23.06.2021 ರಂದು 2 ನೇ ಆರೋಪಿಯ ಮನೆಯಾದ ಹುಬ್ಬಳ್ಳಿಗೆ ತೆರಳಿದ ಚಾಸಾ–28 ರವರು 2 ನೇ ಆರೋಪಿ ಮತ್ತು ಸಿಬ್ಬಂದಿಯೊಂದಿಗೆ ಹಾಜರಾಗಿ ಅಲ್ಲಿ ತಯಾರಿಸಿದ ಸ್ವತ್ತು ಸ್ವಾಧೀನತಾ ಮಹಜರನ್ನು, ಗಾಂಜಾವನ್ನು, ವರದಿ ಹಾಗೂ ಇತರೆ ದಾಖಲೆಯೊಂದಿಗೆ ಹಾಜರುಪಡಿಸಿದ್ದನ್ನು ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ–56 ಎಂದು, ಸಾಕ್ಷಿಯ ಸ್ವೀಕೃತಿಯ ಮೇಲಿರುವ ಸಹಿಯನ್ನು ನಿಪಿ–56(ಎ) ಎಂದು ಗುರುತಿಸಲಾಯಿತು. ಸ್ವತ್ತು ಸ್ವಾಧೀನತಾ ಮಹಜರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–13 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–13(ಬಿ) ಎಂದು ಗುರುತಿಸಲಾಯಿತು.

24. ವಶಪಡಿಸಿಕೊಂಡು ಬಂದಿದ್ದ ಸ್ವತ್ತಿನ ಬಗ್ಗೆ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ಮಾಲುಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ–57 ಎಂದು, ಸಾಕ್ಷಿಯ ಸಹಿಯನ್ನು ನಿಪಿ–57(ಎ) ಎಂದು ಗುರುತಿಸಲಾಯಿತು.

25. ದಿಃ 24.06.2021 ರಂದು ಚಾಸಾ–8, ಚಾಸಾ–7, ಚಾಸಾ–30, ಚಾಸಾ–26, ಚಾಸಾ–27 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಪ್ರಕರಣದಲ್ಲಿ ಕ್ರಮವನ್ನು ತೆಗೆದುಕೊಂಡ ಬಗ್ಗೆ ಕಲಂ 57 ಎಂ.ಡಿ.ಪಿ.ಎಸ್. ಕಾಯಿದೆ ಪ್ರಕಾರ ಪೊಲೀಸ್ ಆಯುಕ್ತರು ಮಂಗಳೂರು ಇವರಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು

ನೋಡುತ್ತಿದ್ದು ಅದನ್ನು ನಿಪಿ–58 ಎಂದು ಗುರುತಿಸಲಾಯಿತು.

26. ದಿಃ 25.06.2021 ರಂದು 2 ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ 30.06.2021 ರಂದು ವಶಪಡಿಸಿಕೊಂಡ ಗಾಂಜಾವನ್ನು inventory ಮಾಡಿಸುವ ಬಗ್ಗೆ ಸತ್ರ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ.

27. ದಿಃ 2.07.2021 ರಂದು ನ್ಯಾಯಾಲಯದ ಆದೇಶದಂತೆ ಪ್ರಕರಣದಲ್ಲಿ ವಶಪಡಿಸಿಕೊಂಡ ಎಲ್.ಎಸ್.ಡಿ. ಮತ್ತು ಗಾಂಜಾವನ್ನು ಮಾನ್ಯ 6 ನೇ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ inventory ಸಲುವಾಗಿ ಹಾಜರುಪಡಿಸಿರುತ್ತೇನೆ. ನ್ಯಾಯಾಲಯವು ಹಾಜರುಪಡಿಸಿದ ಎ 1 ಎಂದು ಗುರುತು ನೀಡಲಾಗಿದ್ದ ಸ್ವತ್ತಿನಲ್ಲಿದ್ದ 840 ಎಲ್.ಎಸ್.ಡಿ. ಸ್ಟಾಂಪ್ ನ್ನು ಸಂಪೂರ್ಣವಾಗಿ ತಜ್ಞರ ವಿಶ್ಲೇಷಣೆಗೆ ಒಳಪಡಿಸಲು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿರುತ್ತದೆ. ಅದಕ್ಕೆ 'B' ಎಂದು ಗುರುತು ನೀಡಿರುತ್ತಾರೆ.

28. ನಂತರ ಗಾಂಜಾವನ್ನು ತೆರೆದು ತೂಕ ಮಾಡಲಾಗಿ 26 ಗ್ರಾಂ ಇದ್ದು ಅದನ್ನು ಸಂಪೂರ್ಣವಾಗಿ ತಜ್ಞರ ವಿಶ್ಲೇಷಣೆಗಾಗಿ ಬಿಳಿ ಬಟ್ಟೆಯಲ್ಲಿ ಹೊಲಿದು ಸೀಲು ಮಾಡಿ ಅದಕ್ಕೆ 'C' ಎಂದು ಗುರುತು ನೀಡಿರುತ್ತಾರೆ. ಎಲ್.ಎಸ್.ಡಿ. 840 ಸ್ಟಾಂಪ್ ನ್ನು ಸಹ ತೂಕ ಮಾಡಿದ್ದು ಅದು 15.05 ಗ್ರಾಂ ಇತ್ತು. ನ್ಯಾಯಾಧೀಶರು ಇವುಗಳನ್ನು ಎಲೆಕ್ಟ್ರಾನಿಕ್ ಮಾಪನದಲ್ಲಿ ತೂಕ ಮಾಡಿರುತ್ತಾರೆ. ಆ ಸಮಯದಲ್ಲಿ ಪ್ರಕ್ರಿಯೆಯ ಛಾಯ ಚಿತ್ರವನ್ನು ಫ್ರಾಸಾ–12 ರವರು ತೆಗೆದಿರುತ್ತಾರೆ.

29. ಈ ಬಗ್ಗೆ ನ್ಯಾಯಾಧೀಶರು inventory proceedings ನ್ನು ಮಾಡಿರುತ್ತಾರೆ. ಹಾಗೆಯೇ ನ್ಯಾಯಾಧೀಶರು ಪ್ರಮಾಣ ಪತ್ರವನ್ನು ಮತ್ತು ಸ್ವತ್ತನ್ನು ನಮಗೆ ನೀಡಿರುತ್ತಾರೆ. inventory proceedings ನ್ನು ನೋಡುತ್ತಿದ್ದು ಅದನ್ನು ನಿಪಿ–59 ಎಂದು, ಸಾಕ್ಷಿಯ ಸಹಿಯನ್ನು ನಿಪಿ–59(ಎ) ಎಂದು ಗುರುತಿಸಲಾಯಿತು. inventory proceedings ಜೊತೆ ಇದ್ದ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–60 ಎಂದು ಗುರುತಿಸಲಾಯಿತು. ನಮಗೆ ಕೊಟ್ಟ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–61 ಎಂದು ಗುರುತಿಸಲಾಯಿತು. ಸದರಿ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ–32 ಎಂದು ಗುರುತಿಸಲಾಗಿರುತ್ತದೆ. ಸಿಡಿಯನ್ನು

ನೋಡುತ್ತಿದ್ದು ಅದನ್ನು ನಿಪಿ–32(ಎ) ಎಂದು ಗುರುತಿಸಲಾಗಿದೆ. ಕಲಂ 65 ಬಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–33 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–33(ಬಿ) ಎಂದು ಗುರುತಿಸಲಾಗಿದೆ. ಎಲ್.ಎಸ್.ಡಿ. ಸ್ಟಾಂಪ್ ಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು 4 ಎಂದು ಗುರುತಿಸಲಾಗಿರುತ್ತದೆ. ಗಾಂಜಾವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮುದ್ದೆ 5 ಎಂದು ಗುರುತಿಸಲಾಗಿರುತ್ತದೆ. ಮುದ್ದೆ ಮಾಲು 5 ರ ಕವರ್ ನ ಮೇಲೆ ಇರುವ ಚೀಟಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–49 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–49(ಎ) ಎಂದು ಗುರುತಿಸಲಾಯಿತು.

30. ದಿಃ 3.07.2021 ರಂದು ಇಂಡಸ್‌ಇಂಡ್ ಬ್ಯಾಂಕ್ ನಿಂದ 3 ನೇ ಆರೋಪಿ ಈತನ ಖಾತೆ ಸಂ.100061838492 ಇದರ ಕೆ.ವೈ.ಸಿ. ಅರ್ಜಿಯ ಪ್ರತಿ, ಮತ್ತು ವ್ಯವಹಾರಗಳ ಸ್ಟೇಟ್ ಮೆಂಟ್ ನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ–25 ರಿಂದ 30 ಎಂದು ಗುರುತಿಸಲಾಗಿರುತ್ತದೆ.

31. ಸದರಿ ಖಾತೆಯ ವ್ಯವಹಾರದ ಸ್ಟೇಟ್ ಮೆಂಟ್ ನ್ನು ಪರಿಶೀಲಿಸಲಾಗಿ ದಿಃ 19.03.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 2,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ–29(ಬಿ) ಎಂದು ಗುರುತಿಸಲಾಯಿತು.

32. ದಿಃ 29.08.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 1,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ–29(ಸಿ) ಎಂದು ಗುರುತಿಸಲಾಯಿತು. ದಿಃ 22.08.2021 ರಂದು 1 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 2,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ–29(ಡಿ) ಎಂದು ಗುರುತಿಸಲಾಯಿತು. ದಿಃ 31.08.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 4,000/– ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ–29(ಇ) ಎಂದು ಗುರುತಿಸಲಾಯಿತು. ದಿಃ 9.09.2020

ರಂದು 1 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 15,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಎಫ್) ಎಂದು ಗುರುತಿಸಲಾಯಿತು. ದಿಃ 11.09.2020 ರಂದು 1 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 10,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಜಿ) ಎಂದು ಗುರುತಿಸಲಾಯಿತು. ದಿಃ 20.09.2020 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 1,200/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಹೆಚ್) ಎಂದು ಗುರುತಿಸಲಾಯಿತು. ದಿಃ 18.02.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 3,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಐ) ಎಂದು ಗುರುತಿಸಲಾಯಿತು. ದಿಃ 22.02.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 4,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಜೆ) ಎಂದು ಗುರುತಿಸಲಾಯಿತು. ದಿಃ 22.06.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 3,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಕೆ) ಎಂದು ಗುರುತಿಸಲಾಯಿತು. ದಿಃ 1.03.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 2,500/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಎಲ್) ಎಂದು ಗುರುತಿಸಲಾಯಿತು. ದಿಃ 27.03.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 6,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಎಂ) ಎಂದು ಗುರುತಿಸಲಾಯಿತು. ದಿಃ 11.04.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 5,000/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಎನ್) ಎಂದು ಗುರುತಿಸಲಾಯಿತು. ದಿಃ 4.05.2021 ರಂದು 2 ನೇ ಆರೋಪಿ ಈತನು 3 ನೇ ಆರೋಪಿಯ ಖಾತೆಗೆ 1,200/- ರೂ.ವನ್ನು ಜಮಾ ಮಾಡಿರುವುದು ಕಂಡು ಬರುತ್ತದೆ. ಸದರಿ ಎಂಟ್ರಿಯನ್ನು ನಿಪಿ-29(ಒ) ಎಂದು ಗುರುತಿಸಲಾಯಿತು. ಈ ಎಲ್ಲಾ ಹಣದ

ವ್ಯವಹಾರವನ್ನು ಆರೋಪಿತರು ಯು.ಪಿ.ಐ. ಮೂಲಕ ಮಾಡಿರುವುದು ಕಂಡು ಬರುತ್ತದೆ.

33. ನಂತರ ಅದೇ ದಿನ ಐ.ಸಿ.ಐ.ಸಿ.ಐ. ಬ್ಯಾಂಕ್ ಪಿ.ಎಂ. ರಸ್ತೆ ಬ್ರಾಂಚ್ ನಿಂದ 2 ನೇ ಆರೋಪಿ ಖಾತೆ ಸಂ.007201030793 ಇದರ ವಿವರ ಮತ್ತು ಕೆ.ವೈ.ಸಿ. ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ಈಗಾಗಲೇ ನಿಪಿ–50 ಮತ್ತು 51 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಸಾಕ್ಷಿದಾರರಾದ ಫ್ರಾಸಾ–11 ಮತ್ತು ಫ್ರಾಸಾ–19 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ.

34. ದಿಃ 4.07.2021 ರಂದು ವಶಪಡಿಸಿಕೊಂಡ ಎಲ್.ಎಸ್.ಡಿ. ಮಾದಕ ವಸ್ತುವನ್ನು ತಜ್ಞರ ಅಭಿಪ್ರಾಯಕ್ಕಾಗಿ ಫ್ರಾಸಾ–16 ರವರ ಮೂಲಕ ಎಫ್.ಎಸ್.ಎಲ್. ಬೆಂಗಳೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈ ಬಗ್ಗೆ ಇರುವ ರಹದಾರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–62 ಎಂದು ಗುರುತಿಸಲಾಯಿತು. ದಿಃ 5.07.2021 ರಂದು ಫ್ರಾಸಾ–6 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಎಫ್.ಎಸ್.ಎಲ್. ಬೆಂಗಳೂರು ಇವರು ನೀಡಿದ ಸ್ವೀಕೃತಿ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–43 ಎಂದು ಗುರುತಿಸಲಾಗಿದೆ.

35. ದಿಃ 9.07.2021 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಗಾಂಜಾವನ್ನು ಆರ್.ಎಫ್.ಎಸ್.ಎಲ್. ಮಂಗಳೂರಿಗೆ ಚಾಸಾ–26 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಈ ಬಗ್ಗೆ ಇರುವ ರಹದಾರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–63 ಎಂದು ಗುರುತಿಸಲಾಯಿತು. ಆರ್.ಎಫ್.ಎಸ್.ಎಲ್. ಮಂಗಳೂರು ಇವರು ನೀಡಿದ ಸ್ವೀಕೃತಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ–64 ಎಂದು ಗುರುತಿಸಲಾಯಿತು.

36. ದಿಃ 17.07.2021 ರಂದು ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ದ್ವಿ ಚಕ್ರ ವಾಹನ ಸಂ.ಕೆಎಲ್–18–ಎಫ್–3859 ಇದರ ಬಿ ಎಕ್ಸ್ ಟ್ರಾಕ್ಟ್ ಒದಗಿಸುವಂತೆ ಆರ್.ಟಿ.ಒ. ಗೆ ಪತ್ರವನ್ನು ಬರೆದು ಅಂಚೆ ಮೂಲಕ ಕಳುಹಿರುತ್ತೇನೆ. ದಿಃ 29.07.2021 ರಂದು ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಅಂಚೆ ಮೂಲಕ ಪಡೆದಿದ್ದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಬಿ ಎಕ್ಸ್ ಟ್ರಾಕ್ಟ್ ನ್ನು ನಿಪಿ–65 ಎಂದು ಗುರುತಿಸಲಾಯಿತು.

37. ಈ ಪ್ರಕರಣದ 3 ನೇ ಆರೋಪಿ ಈತನ ಪತ್ತೆಯ ಬಗ್ಗೆ ಮಂಗಳೂರು ನಗರದ ಬರ್ಕೆಯಲ್ಲಿ ಪ್ರಯತ್ನಿಸಿರುತ್ತೇನೆ. ಆದರೆ ಆತನು ಪತ್ತೆಯಾಗಿರುವುದಿಲ್ಲ.

38. ದಿಃ 31.07.2021 ರಂದು ನ್ಯಾಯಾಲಯಕ್ಕೆ ದಿಃ 12.06.2021 ರಂದು ವಶಪಡಿಸಿಕೊಂಡ ಸ್ವತ್ತಿನ ಬಗ್ಗೆ ಸಲ್ಲಿಸಿದ ಸ್ವತ್ತು ಪಟ್ಟಿಯಲ್ಲಿ ಸ್ವತ್ತು ಪಟ್ಟಿಯ ಕಲಂ ನಂ.5 ರಲ್ಲಿ ಕಣ್ ತಪ್ಪಿನಿಂದ ಬೆರಳಚ್ಚು ಮಾಡಿದ ಕುರಿತಾಗಿ ಮಾಹಿತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-66 ಎಂದು, ಸಾಕ್ಷಿಯ ಸಹಿಯನ್ನು ನಿಪಿ-66(ಎ) ಎಂದು ಗುರುತಿಸಲಾಯಿತು.

39. ದಿಃ 21.08.2021 ರಂದು ಬೆಂಗಳೂರು ಚಾಮರಾಜನಗರದ Foreign Post office ನಿಂದ ಅಂಚೆ ಸಂ.LB148954145FR ಇದರ ಕುರಿತಾಗಿ ವರದಿ ಬಂದಿದ್ದು ಅದನ್ನು ಪರಿಶೀಲಿಸಿದಾಗ ಸದರಿ ಅಂಚೆಯು ಫ್ರಾನ್ಸ್ ದೇಶದಿಂದ ಬೆಂಗಳೂರು ಕಸ್ಟಮ್ಸ್ ಮೂಲಕ Foreign Post office ಗೆ ಬಂದಿದ್ದಾಗಿ ಮತ್ತು ಅಲ್ಲಿಂದ ಕಂಕನಾಡಿ ಎಸ್.ಒ. ಗೆ ದಿಃ 9.06.2021 ರಂದು ಬಂದಿದ್ದಾಗಿ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ದಾಖಲೆಯನ್ನು ಈಗಾಗಲೇ ನಿಪಿ-40 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ-40(ಬಿ) ಎಂದು ಗುರುತಿಸಲಾಯಿತು.

40. ದಿಃ 23.08.2021 ರಂದು ಫ್ರಾಸಾ-14 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 25.08.2021 ರಂದು 1 ನೇ ಆರೋಪಿಯು ನ್ಯಾಯಾಂಗ ಬಂಧನದಲ್ಲಿ ಇದ್ದ ಕಾರಣ ದಿಃ 10.06.2021 ಮತ್ತು ದಿಃ 11.06.2021 ರ ದಿನಚರಿಯನ್ನು ಕಡತಕ್ಕೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ತಜ್ಞರ ಅಭಿಪ್ರಾಯವನ್ನು ಬಾಕಿ ಇಟ್ಟು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸದರಿ ದಿನಚರಿಯನ್ನು ಒಟ್ಟಾಗಿ ಈಗ ನಿಪಿ-67 ಎಂದು ಗುರುತಿಸಲಾಯಿತು.

41. ದಿಃ 14.02.2022 ರಂದು ಎಫ್.ಎಸ್.ಎಲ್. ಬೆಂಗಳೂರಿನಿಂದ ತಜ್ಞರ ಎಲ್.ಎಸ್.ಡಿ. ವರದಿಯನ್ನು ಪಡೆದಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-34 ಎಂದು ಗುರುತಿಸಲಾಗಿದ್ದು, ಮಾದರಿ ಸೀಲನ್ನು ನಿಪಿ-35 ಎಂದು, ಸಾಕ್ಷಿಯ ಸಹಿಯನ್ನು ನಿಪಿ-35(ಸಿ) ಎಂದು ಗುರುತಿಸಲಾಯಿತು.

42. ದಿಃ 23.02.2022 ರಂದು ಮಾದಕ ದ್ರವ್ಯ ಗಾಂಜಾದ ಕುರಿತಾಗಿ ಮಂಗಳೂರು ಎಫ್.ಎಸ್.ಎಲ್. ತಜ್ಞರ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಅಭಿಪ್ರಾಯವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-46 ಎಂದು ಗುರುತಿಸಲಾಗಿದ್ದು, ಮಾದರಿ ಸೀಲನ್ನು ನಿಪಿ-47 ಎಂದು ಗುರುತಿಸಲಾಗಿದೆ. ನಂತರ ಈ ಎರಡು ವರದಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

43. ಫ್ರಾಸಾ-1 ರವರು ನಿಪಿ-6 ರಂತೆ, ಫ್ರಾಸಾ-10 ರವರು ನಿಪಿ-24 ರಂತೆ ನನ್ನ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತಾರೆ. ನ್ಯಾಯಾಲಯದ ವಿ.ಸಿ. ಯಲ್ಲಿ ಕಾಣಿಸುವ ವ್ಯಕ್ತಿ 1 ನೇ ಆರೋಪಿ ಇರುತ್ತಾನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ವಿ.ಆರ್.ಎ. ವಕೀಲರಿಂದಃ**

42. ನಾನು 1 ನೇ ಆರೋಪಿಯ ಬ್ಯಾಂಕ್ ಸ್ಟೇಟ್ ಮೆಂಟ್ ಆಗಲೀ ಅಥವಾ ಯು.ಪಿ.ಐ. ಐಡಿ ಗಳ ವಿವರವನ್ನು ಪಡೆಯಲು ಪ್ರಯತ್ನಿಸಿದ್ದು ಅವುಗಳು ಸಿಕ್ಕಿರುವುದಿಲ್ಲ. 1 ನೇ ಆರೋಪಿಯ ಬ್ಯಾಂಕ್ ಸ್ಟೇಟ್ ಮೆಂಟ್ ಇಲ್ಲದೇ ಇರುವ ಕಾರಣ 1 ನೇ ಆರೋಪಿಗೆ ಸಂಬಂಧಪಟ್ಟ ವಿವರಗಳು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಸಂಬಂಧಪಟ್ಟ ಬ್ಯಾಂಕ್ ವಿವರಗಳು ಎಂದು ಹೇಳುವುದು 9 ತಿಂಗಳ ಹಿಂದಿನದ್ದು ಆಗಿರುತ್ತದೆ ಎಂದರೆ ಸಾಕ್ಷಿಯು ಘಟನೆಗೆ ಸಂಬಂಧಪಟ್ಟವುಗಳಾಗಿರುತ್ತದೆ ಎಂದು ಹೇಳಿರುತ್ತಾರೆ.

43. ಸದರಿ ಪಾರ್ಸಲ್ ಯಾರು ಕಳುಹಿಸಿರುತ್ತಾರೆ ಎನ್ನುವ ಬಗ್ಗೆ ದಾಖಲೆ ಸಿಕ್ಕಿದೆಯಾ ಎಂದರೆ ಸಾಕ್ಷಿಯು ದಾಖಲೆ ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಸ್ವತಃ 1 ನೇ ಆರೋಪಿಯು ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ಮಾದಕ ವಸ್ತುವನ್ನು 3 ನೇ ಆರೋಪಿಯು ಕಳುಹಿಸಿರುತ್ತಾನೆ ಎಂದು ಹೇಳಿರುತ್ತಾನೆ ಎಂದು ಹೇಳುತ್ತಾರೆ. ನಾನು ಹೇಳಿದಂತೆ 1 ನೇ ಆರೋಪಿಯು ಯಾವುದೇ ಸ್ವ ಇಚ್ಛಾ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಮತ್ತು ಪೋಸ್ಟಲ್ ಕವರ್ ನ್ನು ತೋರಿಸುತ್ತೇನೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೋಸ್ಟಲ್ ಕವರ್ ಮೇಲೆ ಬರೆದಿರುವ 9473647816 ಮೊಬೈಲ್ ಸಂಖ್ಯೆಯು 1 ನೇ ಆರೋಪಿಗೆ ಸಂಬಂಧಪಟ್ಟದಾಗಿರುತ್ತದೆ. ಸದರಿ ಮೊಬೈಲ್ ನಂಬರ್ 1 ನೇ ಆರೋಪಿಗೆ ಸಂಬಂಧಪಟ್ಟಿದ್ದು

ಆಗಿರುವುದಿಲ್ಲ ಎಂದರೆ ಸರಿಯಲ್ಲ.

44. ಆರೋಪಿಯು ಕದ್ರಿ ಕಂಬಳದ ಮನೆಗೆ ಹೋಗಿ ಪೋಸ್ಟಲ್ ಕವರ್ ನ್ನು ತೋರಿಸಿರುವುದಿಲ್ಲ ಮತ್ತು ಅದನ್ನು ನಾವು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಮೊಬೈಲ್ ಎಕ್ಸ್ ಟ್ರಾಕ್ಟ್ ನ್ನು ಮಾಡಿರುವುದಿಲ್ಲ ಹಾಗೆಯೇ ಸಿ.ಡಿ.ಆರ್. ನ್ನು ತೆಗೆಸಿರುವುದಿಲ್ಲ. ಸಾಕ್ಷಿಯು ಸ್ವತಃ ವಿಪ್ರೋ ಐ.ಪಿ. ಮೂಲಕ ಮಾತನಾಡುತ್ತಿದ್ದ ಕಾರಣ ಈ ಬಗ್ಗೆ ಸಿ.ಡಿ.ಆರ್. ಮಾಹಿತಿ ಸಿಗುವುದಿಲ್ಲ ಎಂದು ನುಡಿಯುತ್ತಾರೆ.

45. ಪೋಸ್ಟಲ್ ನವರು ಕವರ್ ನ್ನು ಡೆಲವರಿ ಮಾಡಿದ ಬಗ್ಗೆ ಇರುವ ಮೂಲ ದಾಖಲೆಯನ್ನು ಪಡೆದಿರುವುದಿಲ್ಲ. ಸಾಕ್ಷಿ ಸ್ವತಃ ದೃಡೀಕೃತ ನಕಲು ನೀಡಿರುತ್ತಾರೆ ಎಂದು ಹೇಳುತ್ತಾರೆ. ನಿಪಿ–16 ಪೋಸ್ಟಲ್ ಇಲಾಖೆಗೆ ಸಂಬಂಧಪಟ್ಟಿದ್ದು ಇರುವುದಿಲ್ಲ ಮತ್ತು ಅದನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ವಿದೇಶದಿಂದ ಪಾರ್ಸಲ್ ಬಂದಿದೆ ಎಂದು ಪೋಸ್ಟಲ್ ಇಲಾಖೆಯವರು ಯಾವುದೇ ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಸಂಬಂಧಪಟ್ಟಿದ್ದು ಎಂದು ಹೇಳಲಾದ ಮಹಜರನ್ನು ಠಾಣೆಯಲ್ಲೆ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ರೂಂನಲ್ಲಿ ಮಾಡಿದ ಮಹಜರಿನ ಪೋಟೋಗಳು ದೋಷಾರೋಪಣಾ ಪಟ್ಟಿಯಲ್ಲಿ ಇರುವುದಿಲ್ಲ ಎಂದರೆ ಸರಿ. ಅಲ್ಲಿ ಮಹಜರು ಮಾಡದ ಕಾರಣ ಪೋಟೋಗಳು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಇರದೇ ಇದ್ದರೂ ಕೂಡ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು